# ಹೊಳೆನರಸೀಪುರದ ಅಪರ ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ.

## ಸಿ.ಸಿ. ನಂಃ 574/2023

| | | |
|---|---|---|
| ಸಾಕ್ಷಿಯ ಹೆಸರು | ಃ ರಾಹುಲ್ | ಸಿ.ಡಬ್ಲ್ಯೂ ಃ 02 |
| ತಂದೆ ಹೆಸರು | ಃ ಚಂದ್ರೇಗೌಡ | ಪಿ.ಡಬ್ಲ್ಯೂ ಃ 01 |
| ವಯಸ್ಸು | ಃ 24 ವರ್ಷ | ಪ್ರಮಾಣೀಕರಿಸಿದ ದಿಃ 13/06/2024 |
| ವೃತ್ತಿ | ಃ ಖಾಸಗಿ ಕೆಲಸ | |
| ವಾಸ | ಃ ಬೆಂಗಳೂರು | |

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಎ.ಪಿ.ಪಿ.ಯವರಿಂದಃ

ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ಆರೋಪಿಯನ್ನು ನಾನು ನೋಡಿಲ್ಲ. ನಾನು ಯಾವುದೇ ಅಪಘಾತವನ್ನು ನೋಡಿಲ್ಲ. ನಾನು ಅಪಘಾತದ ಸಂಬಂಧ ಯಾವುದೇ ಹೇಳಿಕೆಯನ್ನು ಪೋಲೀಸರಿಗೆ ನೀಡಿಲ್ಲ. ಸಾಕ್ಷಿ ತನ್ನ ಹೇಳಿಕೆಗಳನ್ನು ಅಲ್ಲಗಳೆದಿರುವುದರಿಂದ ಸದರಿ ಹೇಳಿಕೆಯನ್ನು ನಿಪಿ-01 ಎಂದು, ಮುಂದುವರೆದ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು.

(ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ - ಮಾನ್ಯ ಎ.ಪಿ.ಪಿ. ರವರಿಂದಃ

ದಿನಾಂಕಃ 14.10.2022 ರಂದು ನಾನು ಮತ್ತು ನನ್ನ ತಾಯಿ ಕಮಲಮ್ಮರವರು ಅರಕಲಗೂಡಿನಲ್ಲಿರುವ ನಮ್ಮ ನೆಂಟರ ಮನೆಗೆ ಪಿತೃಪಕ್ಷ ಹಬ್ಬಕ್ಕೆ ಹೋಗಲು ಬೈಕಿನಲ್ಲಿ ಹೊರಟ್ಟಿದ್ದೇವು. ನಂತರ ನಾವು ಚನ್ನರಾಯಪಟ್ಟಣಕ್ಕೆ ಬಂದಾಗಾ ಅಲ್ಲಿ ನಮ್ಮ ಚಿಕ್ಕಮ್ಮ ಮಂಗಳ ಹಾಗೂ ಚಿಕ್ಕಪ್ಪ ಉಮೇಶ್ ರವರು ಸಹ ಅದೇ ಊರಿಗೆ ಹಬ್ಬಕೆ ಬರಲು ಕೆಎ-41-ಯು-5699 ರ ಬೈಕಿನಲ್ಲಿ ಚಿಕ್ಕನಾಯಕನಹಳ್ಳಿ ಟೌನ್ ನಿಂದ ಬಂದಾಗಾ ಎಲ್ಲಾರು ಒಟ್ಟಾಗಿ ಚನ್ನರಾಯಪಟ್ಟಣದಿಂದ ಹೊರಟು ಸಂಜೆ 04.30 ಗಂಟೆ ಸಮಯದಲ್ಲಿ ಚಿಕ್ಕವಳ್ಳಿ ಗ್ರಾಮದ ಬಳಿ ಚನ್ನರಾಯಪಟ್ಟಣ-ಹೊಳೆನರಸೀಪುರ ರಸ್ತೆಯಲ್ಲಿ ಬರುತ್ತಿದ್ದಾಗಾ ನಮ್ಮ ಚಿಕ್ಕಪ್ಪ ಉಮೇಶ್ ರವರು ಚಾಲನೆ ಮಾಡುತ್ತಿದ್ದ ಬೈಕ್ ಅನ್ನು ಅತಿವೇಗ ಹಾಗೂ ಅಜಾಗೂರುಕತೆಯಿಂದ ಚಾಲನೆ ಮಾಡಿಕೊಂಡು ರಸ್ತೆಯ ಗುಂಡಿಗೆ ಇಳಿಸಿದ್ದರಿಂದ ಬೈಕಿನ ಹಿಂಭಾಗದಲ್ಲಿ ಕುಳಿತ್ತಿದ್ದ ನಮ್ಮ ಚಿಕ್ಕಮ್ಮ ಮಂಗಳರವರು ಬೈಕಿನಿಂದ ರಸ್ತೆಗೆ ಬಿದ್ದರು ಎಂದರೆ ಸರಿಯಲ್ಲ.

ಅವರು ಬಿದ್ದ ಪರಿಣಾಮ ತಲೆಯ ಹಿಂಭಾಗ ರಕ್ತ ಗಾಯವಾಗಿದ್ದು, ತಕ್ಷಣ ನಮ್ಮ ಚಿಕ್ಕಪ್ಪನ ಹಿಂದೆಯೇ ಬೈಕಿನಲ್ಲಿ ಹೋಗುತ್ತಿದ್ದ ಬೈಕ್ ಅನ್ನು ನಿಲ್ಲಿಸಿ ನಾನು ಮತ್ತು ನನ್ನ ತಾಯಿ ಮಂಗಳರವರನ್ನು ಎತ್ತಿ ಸುಧಾರಿಸಿದೇವು ಎಂದರೆ ಸರಿಯಲ್ಲ. ನಮ್ಮ ಚಿಕ್ಕಮ್ಮ ಮಂಗಳಾರವರನ್ನು ನನ್ನ ತಾಯಿ ಚಾಸಾ-1 ರವರು

ಆರೋಪಿ ಸೇರಿ ಹೊಳೆನರಸೀಪುರ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ. ವೈದ್ಯರ ಸಲಹೆ ಮೇರೆಗೆ ಹಾಸನಕ್ಕೆ ನಂತರ ಅಲ್ಲಿಂದ ಬೆಂಗಳೂರಿನ ಆಸ್ಟರ್ ಆರ್.ವಿ. ಆಸ್ಪತ್ರೆಗೆ ಹೋಗಿ ಚಿಕಿತ್ಸೆಗೆ ದಾಖಲು ಮಾಡಿದೇವು ಎಂದರೆ ಸರಿಯಲ್ಲ. ಚಾಸಾ-1 ರವರು ಕೆಎ-41-ಯು-5699 ರ ಬೈಕ್ ಚಾಲಕ ಅಂದರೆ ಆರೋಪಿ ಅವರ ವಿರುದ್ಧ ಅತಿವೇಗ ಹಾಗೂ ಅಜಾಗೂರುಕತೆ ಚಾಲನೆಯಿಂದ ಅಪಘಾತದ ಬಗ್ಗೆ ಹೊಳೆನರಸೀಪುರ ಗ್ರಾಮಾಂತರ ಠಾಣೆಯಲ್ಲಿ ದೂರು ನೀಡಿದರು ಎಂದರೆ ನನಗೆ ಗೊತ್ತಿಲ್ಲ. ದಿನಾಂಕಃ 07.10.2022 ರಂದು ನನ್ನ ಹೇಳಿಕೆಯನ್ನು ಪೋಲೀಸರಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಮುಂದುವರೆದ ಹೇಳಿಕೆಯನ್ನು ದಿನಾಂಕಃ 09.10.2022 ರಂದು ಪೋಲೀಸ್ ಠಾಣೆಗೆ ಹಾಜರಾಗಿ ದಿನಾಂಕಃ 04.10.2022 ರಲ್ಲಿ ಅಪಘಾತಪಡಿಸಿದ ಬೈಕ್ ಕೆಎ-41-ಯು-5699 ರ ಚಾಲಕನ ಅತಿವೇಗ ಹಾಗೂ ಅಜಾಗೂರುಕತೆಯಿಂದ ಚಾಲನೆ ಮಾಡಿದ ಪರಿಣಾಮವಾಗಿ ಆಸ್ಟರ್ ಆರ್.ವಿ. ಆಸ್ಪತ್ರೆ, ಬೆಂಗಳೂರಿನಲ್ಲಿ ನನ್ನ ಚಿಕ್ಕಮ್ಮ ಮಂಗಳಾರವರು ದಿನಾಂಕಃ08.10.2022 ರ ಬೆಳಿಗ್ಗೆ 11.17 ಗಂಟೆಗೆ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಘಟನೆಯ ಬಗ್ಗೆ ಸಂಪೂರ್ಣ ಗೊತ್ತಿದ್ದರೂ ಸಹ, ಆರೋಪಿಯು ನನ್ನ ಚಿಕ್ಕಪ್ಪನಾಗಿರುವುದರಿಂದ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಡಿ.ಎಸ್.ಕೆ. ವಕೀಲರಿಂದಃ ಪಾಟಿ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲಃ

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ.ಸ.ಇ.**

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ,
ಹೊಳೆನರಸೀಪುರ